ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue-6, May- June 2025, Pp. 28-34
©*IIMRD*, Mysuru

IIMRD JOURNALS
www.iimrd.com

# ಭಾರತದಲ್ಲಿ ಮುಸ್ಲಿಂ ಮಹಿಳೆಯರ ಶಿಕ್ಷಣ ಮತ್ತು ಲಿಂಗ ಅಸಮಾನತೆ: ಒಂದು ವಿಮರ್ಶೆ

**ಆಯಿಷಾ ಜಮಾಲ್**
ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಸರ್ಕಾರಿ ಮಹಾವಿದ್ಯಾಲಯ (ಸ್ವಾಯತ್ತ) ಮಂಡ್ಯ.

**ಸಾರಾಂಶ: (Abstract)**

*ಭಾರತವು ಹಲವಾರು ವಿಷಯಗಳಲ್ಲಿ ಶ್ರೇಷ್ಠವಾದ ಸ್ಥಾನವನ್ನು ಹೊಂದಿರುವ ರಾಷ್ಟ್ರ. ಭಾರತವು ವಿಶ್ವದ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿಯೇ ಬಹುದೊಡ್ಡ ರಾಷ್ಟ್ರ. ಹಾಗೆಯೇ ಜನಸಂಖ್ಯೆಯಲ್ಲೂ ಕೂಡ ಚೀನಾವನ್ನು ಹೊರತುಪಡಿಸಿದರೆ ವಿಶ್ವದ ಎರಡನೇ ಅತಿದೊಡ್ಡ ರಾಷ್ಟ್ರವೂ ಆಗಿದೆ. ಹಾಗಾಗಿ ವಿಶ್ವದಲ್ಲಿಯೇ ಅತ್ಯಂತ ಶ್ರೇಷ್ಠವಾದ ಸಂವಿಧಾನವನ್ನು ಹೊಂದಿರುವ ರಾಷ್ಟ್ರದಲ್ಲಿ ರಾಷ್ಟ್ರದ ಸಮಾಜೋ ಆರ್ಥಿಕ, ಧಾರ್ಮಿಕ, ಸಾಂಪ್ರದಾಯಿಕ, ಭೌಗೋಳಿಕ ವಿಚಾರಗಳಲ್ಲಿ ವಿವಿಧತೆಗಳು ಹಾಗು ಹಲವಾರು ವೈಶಿಷ್ಠತೆಗಳನ್ನೂ ಸಹ ಇಲ್ಲಿ ಗುರ್ತಿಸಬಹುದು. ಆದ್ದರಿಂದ ಭಾರತದಲ್ಲಿ ವಿವಿಧ ಜಾತಿ, ಧರ್ಮ, ಸಂಸ್ಕೃತಿ, ಸಂಪ್ರದಾಯಗಳಲ್ಲಿ ವೈವಿಧ್ಯತೆಯನ್ನು ಕಾಣಬಹುದಾಗಿದೆ. ಹಿಂದೂಗಳ ನಂತರ ಭಾರತದ ಜನಸಂಖ್ಯೆಯಲ್ಲಿ ಮುಸ್ಲಿಂರು ಎರಡನೇ ಸ್ಥಾನದಲ್ಲಿರುವ ಅಲ್ಪಸಂಖ್ಯಾತ ಸಮುದಾಯವಾಗಿದೆ. ಮುಸ್ಲಿಂರು ಇಲ್ಲಿಯವರೆಗೆ ಶಿಕ್ಷಣದಲ್ಲಿ ಪ್ರಗತಿಯನ್ನು ತೀರ ಕಡಿಮೆಮಟ್ಟದಲ್ಲಿ ಹೊಂದಿದ್ದಾರೆ ಹಾಗು ಇವರ ಶೈಕ್ಷಣಿಕ ಅಭಿವೃದ್ಧಿಯು ತೀರ ಹಿಂದುಳಿದಿದೆ. ಅದರಲ್ಲೂ ಮುಸ್ಲಿಂ ಮಹಿಳೆಯರ ಶಿಕ್ಷಣದ ಪರಿಸ್ಥಿತಿಯು ತೀರ ಕೆಟ್ಟದಾಗಿದೆ. ಇದು ಶಿಕ್ಷಣದಲ್ಲಿ ಲಿಂಗ ಅಸಮಾನತೆಗೆ ಕಾರಣವಾಗುತ್ತದೆ. ಇದೇ ವಿಚಾರವನ್ನು ಅಲ್ಪಸಂಖ್ಯಾತರ ಸುಧಾರಣೆಗೆ ರಚನೆಗೊಂಡು ಅನೇಕ ಸಮಿತಿಗಳ ವರದಿಗಳು, ಸರ್ಕಾರದ ನೀತಿಗಳಲ್ಲೂ ಕಳವಳವನ್ನು ವ್ಯಕ್ತಪಡಿಸಿರುವುದನ್ನು ಗುರ್ತಿಸಬಹುದು. ಈ ಲೇಖನದಲ್ಲಿ ಶಿಕ್ಷಣದಲ್ಲಿ ಲಿಂಗ ಅಸಮಾನತೆಗೆ ಕಾರಣವಾಗುವ ಅಂಶಗಳನ್ನು ಸಾಮಾಜಿಕವಾಗಿ ಗುರ್ತಿಸುವ ಮತ್ತು ಲಿಂಗ ಸಮಾನತೆಯನ್ನು ಕಡಿಮೆಗೊಳಿಸಲು ಕೆಲವೊಂದು ಸಲಹಾತ್ಮಕ ಅಂಶಗಳನ್ನು ನೀಡಲಾಗಿದೆ.*

**ಮುಖ್ಯಪದಗಳು (Keywords):** ಶಿಕ್ಷಣ, ಮುಸ್ಲಿಂ ಸಮುದಾಯ, ಮಹಿಳೆಯರ ಸ್ಥಾನಮಾನ, ಲಿಂಗ ಅಸಮಾನತೆ

## ಪೀಠಿಕೆ

ಭಾರತದಲ್ಲಿ ಮುಸ್ಲಿಂರ ಶಿಕ್ಷಣದ ಸ್ಥಿತಿಯು ಶೋಚನೀಯವಾದ ಪರಿಸ್ಥಿತಿಯಲ್ಲಿದೆ. ರಾಷ್ಟ್ರದ ಜನಸಂಖ್ಯೆಯಲ್ಲಿ ಬಹುಪಾಲು ಭಾಗವನ್ನು ಹೊಂದಿರುವ ಒಂದು ನಿರ್ದಿಷ್ಟ ಸಮುದಾಯದವರ ನಿರಂತರ ಹಿಂದುಳಿದಿರುವಿಕೆಯು ದೇಶದ ಒಟ್ಟಾರೆ ಸಮಾಜೋ–ಆರ್ಥಿಕ, ರಾಜಕೀಯ ಅಭಿವೃದ್ಧಿಯಲ್ಲಿ ಅಡ್ಡಿಯನ್ನುಂಟು ಮಾಡುತ್ತದೆ ಎಂದು ಅಲ್ಲಸಂಖ್ಯಾತರ ಅಭಿವೃದ್ಧಿಗೆ ರಚಿತಗೊಂಡಂತಹ ಹಲವಾರು ಸಮಿತಿಗಳ ವರದಿಗಳು ಅಭಿಪ್ರಾಯಪಟ್ಟಿದೆ.

*Please cite this article as:* ಆಯಿಷಾ ಜಮಾಲ್. (2025). ಭಾರತದಲ್ಲಿ ಮುಸ್ಲಿಂ ಮಹಿಳೆಯರ ಶಿಕ್ಷಣ ಮತ್ತು ಲಿಂಗ ಅಸಮಾನತೆ: ಒಂದು ವಿಮರ್ಶೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(6). ಪು.ಸಂ.* 28–34

ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಒಂದಾದ ಭಾರತ ರಾಷ್ಟ್ರದಲ್ಲಿ ಹಿಂದೂ ಧರ್ಮದವರನ್ನು ಹೊರತುಪಡಿಸಿದರೆ ಅಲ್ಪಸಂಖ್ಯಾತರಲ್ಲಿ ಅತೀಹೆಚ್ಚು ಜನಸಂಖ್ಯೆಯನ್ನು ಮುಸ್ಲಿಂ ಸಮುದಾಯವು ಹೊಂದಿದೆ. ಹಾಗಾಗಿ ಭಾರತ ಸಂವಿಧಾನದ ಅಲ್ಪಸಂಖ್ಯಾತರಿಗೂ ಕೂಡ ಸಂವಿಧಾನದ ಮುಖಾಂತರ ಅವಕಾಶ ಮತ್ತು ಸವಲತ್ತುಗಳನ್ನು ನೀಡಿದೆ. ಯಾವುದೇ ಒಂದು ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಅದು ತನ್ನ ದೇಶದ ಅಲ್ಪಸಂಖ್ಯಾತರಿಗೆ ನೀಡಲಾಗುವ ಅವಕಾಶಗಳ ಮುಖಾಂತರ ಸಾಧ್ಯವಾಗುತ್ತದೆ ಎಂಬುದಾಗಿ ಹೇಳಬಹುದು.

ಭಾರತ ಸಂವಿಧಾನದಲ್ಲಿ 25 ರಿಂದ 30 ನೇ ವಿಧಿಗಳಲ್ಲಿ ಧಾರ್ಮಿಕ, ಸಾಂಸ್ಕೃತಿಕ ಮತ್ತು ಭಾಷಾ ಅಲ್ಪಸಂಖ್ಯಾತರ ಹಕ್ಕುಗಳ ಬಗ್ಗೆ ತಿಳಿಸಿದೆ. ಹಾಗಾಗಿಯೇ ಭಾರತವು ಒಂದು ನಿಜವಾದ ಪ್ರಜಾಪ್ರಭುತ್ವ ಮತ್ತು ಬಹುತ್ವವಾದಿ ರಾಷ್ಟ್ರವಾಗಿದೆ ಎನ್ನಬಹುದು. ಆದಗ್ಯೂ ಭಾರತದ ಉದಾತ್ತ ಉದ್ದೇಶಗಳ ರಚನೆ ಮತ್ತು ನಿಜವಾದ ಸಾಕ್ಷಾತ್ಕಾರಗಳ ನಡುವೆ ಬಹಳ ಅಂತರವಿದೆ. ಅಲ್ಪಸಂಖ್ಯಾತರಿಗೆ ಹಲವಾರು ಹಕ್ಕುಗಳನ್ನೂ ನೀಡಿದ್ದರೂ ಕೂಡ ಅಲ್ಪಸಂಖ್ಯಾತರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದು ಅದರಲ್ಲೂ ವಿಶೇಷವಾಗಿ ಮುಸ್ಲಿಂ ಸಮುದಾಯದವರ ಭದ್ರತೆಯೂ ಕೂಡ ಒಂದಾಗಿದೆ. ಮುಸ್ಲಿಂರು ಇಂದು ಸಂವಿಧಾನಿಕವಾಗಿ ಅವಕಾಶಗಳನ್ನೂ ಹೊಂದಿದ್ದರೂ ಕೂಡ ಶೈಕ್ಷಣಿಕವಾಗಿ ತೀರ ಹಿಂದಿಳಿದಿದ್ದಾರೆ ಇದಕ್ಕೆ ಸಂವಿಧಾನಿಕ ಅವಕಾಶಗಳನ್ನು ಸರಿಯಾಗಿ ಜಾರಿ ಮಾಡದಿರುವುದೇ ಕಾರಣವಾಗಿದೆ. ಹಾಗಾಗಿಯೇ ಇದು ಪರೋಕ್ಷವಾಗಿ ಲಿಂಗ ಅಸಮಾನತೆಗೆ ಕಾರಣವಾಗಿದೆ.

ಭಾರತದಲ್ಲಿ ಪ್ರತಿ ಸಮುದಾಯವು ಕುಟುಂಬ ಅನುವಂಶಿಕತೆ, ಸಂಪ್ರಾದಾಯ, ಆಚರಣೆಗಳಲ್ಲಿ, ಸಂಸ್ಕೃತಿಯಲ್ಲಿ ವಿಭಿನ್ನತೆಗಳನ್ನು ಹೊಂದಿದೆ ಮತ್ತು ಈ ವಿಷಯಗಳಲ್ಲಿ ಆಯಾ ಸಮುದಾಯದವರ ವೈಯಕ್ತಿಕ ಕಾನೂನುಗಳ ಮೂಲಕ ನಿಯಂತ್ರಣವನ್ನೂ ಕೂಡ ಹೊಂದಿರುತ್ತದೆ. ಈ ಸಮುದಾಯಗಳು ತಮ್ಮ ವೈಯಕ್ತಿಕ ಕಾನೂನಿನ ರಕ್ಷಣೆಯನ್ನೇ ತನ್ನ ಮೂಲಭೂತ ಕರ್ತವ್ಯವನ್ನಾಗಿ ಪಾಲಿಸುತ್ತವೆ. ಇವರಿಗೆ ಸಂವಿಧಾನಿಕವಾಗಿ ಈ ರೀತಿಯಾದ ಯಾವುದೇ ರೀತಿಯ ಹಕ್ಕನ್ನು ನೀಡದಿದ್ದರೂ ಸಹ ಸಮುದಾಯಗಳಿಗೆ ನೀಡಲಾದ ಸಂಸ್ಕೃತಿಯ ಹಕ್ಕನ್ನು ಕುರಿತು, ಸಮುದಾಯಗಳ ವೈಯಕ್ತಿಕ ಕಾನೂನುಗಳಲ್ಲಿ ರಾಜ್ಯದ ಹಸ್ತಕ್ಷೇಪ ಮಾಡದಿರುವಿಕೆಯನ್ನು ಸಮರ್ಥಿಸಲು ಬಳಸಲಾಗುತ್ತದೆ. ಸಮುದಾಯಗಳ ವೈಯಕ್ತಿಕ ಕಾನೂನುಗಳಿಗೆ ಸಂಬಂಧಪಟ್ಟಂತೆ ಅವು ಸಾಮಾನ್ಯವಾಗಿ ಮಹಿಳೆಯರ ವಿರುದ್ದ ಪಕ್ಷಪಾತ ತೋರುತ್ತದೆ. ಈ ರೀತಿಯಾದ ಕಾನೂನುಗಳಿಂದಲೇ ಕೆಲವು ಅಸಮಾನತೆಗಳಿಗೆ ಅದರಲ್ಲೂ ಲಿಂಗ ಅಸಮಾನತೆಗಳಿಗೆ ಕಾರಣವಾಗುತ್ತದೆ. ರಾಜಕೀಯವಾಗಿ ಶೈಕ್ಷಣಿಕವಾಗಿ ತಮ್ಮ ಸಂಪ್ರದಾಯಗಳನ್ನು ಅವಲಂಬಿಸಿವೆ. ಇವರಿಗೂ ಅವರು ಹೊರಬರಲು ಪ್ರಯತ್ನಿಸುತ್ತಿಲ್ಲ ಹಾಗಾಗಿ ಮುಸ್ಲಿಂ ಅಲ್ಪಸಂಖ್ಯಾತರು ಸಾಂವಿಧಾನಿಕವಾಗಿ ಎಲ್ಲಾ ರೀತಿಯಾದ ಅವಕಾಶಗಳನ್ನು ಹೊಂದಿದ್ದರೂ, ಹಕ್ಕುಗಳ ಆಚರಣೆಯಲ್ಲಿ ಹಿಂದುಳಿದಿದ್ದು, ಅದರಲ್ಲೂ ಮಹಿಳೆಯರ ಸಂಪ್ರದಾಯಿಕತೆಗೆ ಅಂಟಿಕೊಂಡಿರುವಿಕೆಯು ಅವರ ಸಮಾಜದ ಮುಖ್ಯವಾಹಿನಿಗೆ ಬರಲು ತಡೆಯುವಂತಾಗಿದೆ ಹಾಗಾಗಿ ಲಿಂಗಸಮಾನತೆ ಸಾಧಿಸಲು ಸಾಧ್ಯವಾಗುತ್ತಿಲ್ಲ ಮತ್ತು ಶಿಕ್ಷಣದ ಸಾಧನೆಗೆ ಅಡ್ಡಿಯಾಗಿದೆ ಎನ್ನಬಹುದಾಗಿದೆ.

**ಅಲ್ಪಸಂಖ್ಯಾತರ ಹಕ್ಕುಗಳು**

ಅಲ್ಪಸಂಖ್ಯಾತರಲ್ಲಿ ಮುಸ್ಲಿಂ ಸಮುದಾಯವು ಬಹುಸಂಖ್ಯೆಯಲ್ಲಿರುವ ಸಮುದಾಯವಾಗಿದೆ. ಭಾಷೆ, ಜಾತಿ, ಧರ್ಮದ ಆಧಾರದ ಮೇಲೆ ಸಾಂಪ್ರದಾಯಿಕ ಗುಂಪುಗಳು ಭಾರತದಲ್ಲಿ ಅಲ್ಪಸಂಖ್ಯಾತ ಸಮುದಾಯಗಳನ್ನು ರೂಪಿಸುತ್ತದೆ. ಎಲ್ಲರೂ ತಮ್ಮದೇ ಆದ ಸಾಂಪ್ರದಾಯಿಕ ಕ್ರಮಾನುಗಳ ಸ್ಥಾನಗಳನ್ನು ನಿರ್ವಹಿಸಲು ಬಯಸುತ್ತವೆ. ಭಾರತದಲ್ಲಿನ ಮುಸ್ಲಿಂ ಸಮುದಾಯವು ಇವೇ ಗುಂಪುಗಳಂತೆಯೇ ಹಲವಾರು ಒತ್ತಡಗಳಿಗೊಳಪಟ್ಟಿತ್ತು. ಆದರೆ ಅವರು ಐತಿಹಾಸಿಕವಾಗಿಯೇ ಹೊಂದಿರುವ ಪ್ರಾಬಲ್ಯತೆ ಮತ್ತು ಬಹುಸಂಖ್ಯಾತತೆ ಅಲ್ಪಸಂಖ್ಯಾತರ ಸಮುದಾಯದವರಲ್ಲೇ ಇವರ ಸ್ಥಾನವನ್ನು ಅನನ್ಯಗೊಳಿಸಿದೆ.

ಮುಸ್ಲಿಂರು ಅಲ್ಪಸಂಖ್ಯಾತರಲ್ಲೇ ಬಹುಸಂಖ್ಯೆಯನ್ನು ಹೊಂದಿದ್ದಾರೆ ಮತ್ತು ಇವರ ಐತಿಹಾಸಿಕ ಮತ್ತು ಸಾಂಸ್ಕೃತಿಕ ಗುಣಲಕ್ಷಣಗಳಿಂದಾಗಿ ಅವರು ನಿರ್ದಿಷ್ಟವಾದ ಗುರುತನ್ನು ಹೊಂದಲು ಸಾಧ್ಯವಾಗಿದೆ ಭಾರತವು ವಿಶ್ವದ ಅತಿದೊಡ್ಡ ಮುಸ್ಲಿಂ ಜನಸಂಖ್ಯೆಯನ್ನು ಹೊಂದಿದೆ. ಅಲ್ಪಸಂಖ್ಯಾತರು ವಿವಿಧ ರೀತಿಯ ತಾರತಮ್ಯಗಳನ್ನೂ ಎದುರಿಸುತ್ತಿದ್ದಾರೆ.

ಭಾರತೀಯ ಅಲ್ಪಸಂಖ್ಯಾತರ ಪ್ರಮುಖವಾದ ಕೊರತೆಯೆಂದರೆ ಆರ್ಥಿಕವಾಗಿ ಪ್ರಾಬಲ್ಯತೆಯನ್ನು ಹೊಂದಿಲ್ಲದಿರುವುದು ಆರ್ಥಿಕ ಕ್ಷೇತ್ರದಲ್ಲಿ ಅವರು ಬಹುಸಂಖ್ಯಾತ ಸಮುದಾಯದವರಿಗಿಂತ ಹಿಂದುಳಿದಿದ್ದಾರೆ. ಇದರಿಂದಾಗಿಯೇ ಈ ಸಮುದಾಯದವರ ಶೈಕ್ಷಣಿಕ ಪ್ರಗತಿಗೆ ಅಡ್ಡಿಯಾಗಿದೆ. ಭಾರತದ ಸಂವಿಧಾನದಲ್ಲಿಯೇ ಅಲ್ಪಸಂಖ್ಯಾತರಿಗೆ ಸಂಬಂಧಿಸಿದ 25 ರಿಂದ 30ನೇ ವಿಧಿಗಳು ಅಲ್ಪಸಂಖ್ಯಾತರಿಗೆ ಕೆಲವೊಂದು ವಿಶೇಷ ಸ್ಥಾನಮಾನಗಳನ್ನು ನೀಡಲಾಗಿದೆ. ಆದಾಗ್ಯೂ ಅಲ್ಪಸಂಖ್ಯಾತರು ಸಮಾಜದ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ತೀವ್ರವಾಗಿ ಹಿಂದುಳಿದಿದ್ದಾರೆ. ಇವರ ಈ ಪರಿಸ್ಥಿತಿಯನ್ನು ಕುರಿತು ಅಧ್ಯಯನ ಮಾಡಲು ಸರ್ಕಾರವು ಹಲವಾರು ಸಮಿತಿಗಳನ್ನು ರಚಿಸಿ ವರದಿಗಳನ್ನು ಪಡೆದಿದೆ.

ಸಾಚಾರ್ ಸಮಿತಿ, ರಂಗನಾಥ್ ಮಿಶ್ರಾ ಸಮಿತಿಯ ವರದಿಗಳು, ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮಗಳಲ್ಲಿ ಅಲ್ಪಸಂಖ್ಯಾತ ಸಮುದಾಯದವರ ಮಹಿಳೆಯರ ಸ್ಥಿತಿಗತಿಗಳ ಸುಧಾರಣೆ ಅನೇಕ ಶಿಫಾರಸ್ಸುಗಳನ್ನು ನೀಡಲಾಗಿದೆ ಅದಕ್ಕೂ ಮೊದಲು ಅಲ್ಪಸಂಖ್ಯಾತರ ಮಹಿಳೆಯರ ಸ್ಥಿತಿಗತಿಗಳ ಕುರಿತು ಅಧ್ಯಯನ ಮಾಡಬೇಕಾಗಿದೆ.

**ಮಹಿಳೆಯರ ಸ್ಥಿತಿ**

ಭಾರತೀಯ ಸಮಾಜದಲ್ಲಿ ಮಹಿಳೆಯರ ಸ್ಥಿತಿಯು ಹೆಚ್ಚು ಚರ್ಚೆಯ ವಿಷಯವಾಗಿದೆ. ಇಸ್ಲಾಂ ಧರ್ಮದ ಅಡಿಯಲ್ಲಿ ಮಹಿಳೆಯರ ಸ್ಥಾನವು ಬಹಳ ಗಂಭೀರವಾಗಿದೆ. ವಿದ್ಯಾವಂತ ಮಹಿಳೆಯರ ಪರಿಸ್ಥಿತಿಯು ಮುಸ್ಲಿಂರಲ್ಲಿ ಪದೇ ಪದೇ ವಿವಾದಗಳಿಗೆ ಕಾರಣವಾಗಿದೆ. ಮುಸ್ಲಿಂ ಮಹಿಳೆಯರ ಹಕ್ಕುಗಳ ಕುರಿತ ವಿಚಾರವು ಇಸ್ಲಾಂ ರಾಷ್ಟ್ರಗಳಲ್ಲಿಯೇ ಹೆಚ್ಚಿದ್ದು ಇದೊಂದು ಜ್ವಲಂತ ಸಮಸ್ಯೆಯಾಗಿದೆ.

ಪುರುಷ ಮತ್ತು ಮಹಿಳೆ ಎನ್ನುವ ತಾರತಮ್ಯವಿಲ್ಲದೇ ಲಿಂಗದ ಮೇಲೆ ತಾರತಮ್ಯ ಮಾಡದೇ ಎಲ್ಲರಿಗೂ ಸಮಾನವಾದ ಹಕ್ಕುಗಳನ್ನು ಒದಗಿಸಿಕೊಡುವುದು ಮಾನವ ಹಕ್ಕುಗಳ ಒಂದು ಭಾಗವಾಗಿದೆ. ಭಾರತೀಯ ಸಂವಿಧಾನದಲ್ಲೂ ಕೂಡ ಈ ಹಕ್ಕು ಅಭಿವ್ಯಕ್ತಗೊಳ್ಳುತ್ತದೆ. ಆದರೆ ವಾಸ್ತವದಲ್ಲಿ ಭಾರತದಲ್ಲಿ

ಮುಸ್ಲಿಂ ಮಹಿಳೆಯರು ತಮ್ಮ ಸಮಾನ ಹಕ್ಕುಗಳನ್ನು ಸಂಪೂರ್ಣವಾಗಿ ಆನಂದಿಸಲು ಸಾಧ್ಯವಾಗದ ಅತ್ಯಂತ ವಂಚಿತ ಗುಂಪುಗಳಲ್ಲಿ ಒಂದಾಗಿದೆ. ಹಾಗಾಗಿ ಅವರ ಈ ದುರ್ಬಲತೆಗೆ ಹಲವಾರು ಕಾರಣಗಳುಂಟು ಅವುಗಳನ್ನು ಗುರ್ತಿಸುವುದಾದರೆ

- ಸಾಂಸ್ಕೃತಿಕ ಮತ್ತು ಧಾರ್ಮಿಕ ಪರಿಸ್ಥಿತಿ.
- ಸಾಂಪ್ರದಾಯಿಕ ವೈಯಕ್ತಿಕ ಕಾನೂನು.
- ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಪರಿಸ್ಥಿತಿ.
- ಮುಸ್ಲಿಂ ಮಹಿಳೆಯರ ಮೇಲಿನ ದೌರ್ಜನ್ಯಗಳು

ಮುಸ್ಲಿಂ ಮಹಿಳೆಯರ ಸಮಸ್ಯೆಗಳು ಅನೇಕ ಬದಿಯ ಮತ್ತು ಮುಸ್ಲಿಂ ಸಮಾಜದ ಸಮಸ್ಯೆಗಳಿಗೆ ನಿಕಟ ಸಂಬಂಧ ಹೊಂದಿದೆ. ಆದ್ದರಿಂದ ಮುಸ್ಲಿಂ ಮಹಿಳೆಯರ ಪರಿಸ್ಥಿತಿಯನ್ನು ಸುಧಾರಿಸುವ ಮತ್ತು ಮುಸ್ಲಿಂ ಸಮಾಜದ ಪರಿಸ್ಥಿತಿಯನ್ನು ಸುಧಾರಿಸುವ ವಿಧಾನಗಳು ಒಂದಕ್ಕೊಂದು ನಿಕಟವಾದ ಸಂಬಂಧವನ್ನು ಹೊಂದಿರುತ್ತದೆ.

ಮುಸ್ಲಿಂ ಮಹಿಳೆಯರನ್ನು ಉತ್ತಮಗೊಳಿಸುವ ವಿಧಾನವು ಮುಖ್ಯವಾಗಿ ಮುಸ್ಲಿಂ ಸಮಾಜದ ಸಮಸ್ಯೆಗಳನ್ನು ಪರಿಹರಿಸುವ ವಿಧಾನಗಳನ್ನು ಅವಲಂಬಿಸುತ್ತವೆ. ಹಾಗಾಗಿ ಮುಸ್ಲಿಂರು ಆ ನಿರ್ಬಂಧಗಳಿಗೆ ಸೀಮಿತವಾಗಿರಬಾರದು. ನಿರ್ದಿಷ್ಟವಾಗಿ ಹಲವಾರು ಮುಸ್ಲಿಂ ರಾಷ್ಟ್ರಗಳು ಪುರುಷರು ಮತ್ತು ಮಹಿಳೆಯರು ಎನ್ನುವ ಲಿಂಗ ಸಮಾನತೆಯ ಕುರಿತಾದ ಲೇಖನಗಳನ್ನು ಆಕ್ಷೇಪಿಸುತ್ತದೆ.

ದೈವಿಕ ಕಾನೂನಿನ ಸಿದ್ಧಾಂತದ ಗುಲಾಮಗಿರಿ ವ್ಯವಸ್ಥೆಗೆ ಆಧುನಿಕ ಸಮಾಜವು ಸ್ವಾಗತಿಸುವುದಿಲ್ಲ ಆಧುನಿಕ ಸಮಾಜದಲ್ಲಿ ಮಾನವ ಹಕ್ಕುಗಳು ಮಾನವನ ಪ್ರಜ್ಞೆ ಮತ್ತು ಮಾನವ ಘನತೆಯ ಪರಿಕಲ್ಪನೆಯಿಂದ ನಿಯಂತ್ರಿಸಲ್ಪಡುತ್ತದೆ. ಮಧ್ಯಕಾಲೀನ ಅವಧಿಯಲ್ಲಿ ಧರ್ಮಶಾಸ್ತ್ರಜ್ಞರು ರಚಿಸಿರುವ ಕಾನೂನುಗಳು, ಧರ್ಮಗ್ರಂಥಗಳಲ್ಲಿ ಮಹಿಳೆಯರ ಸ್ಥಾನಮಾನದ ಕುರಿತ ವ್ಯಾಖ್ಯಾನಗಳಿದ್ದರೂ, ಇಂದಿನ ಪರಿಸ್ಥಿತಿಯಲ್ಲಿ ಮಹಿಳೆಯರು ಇದನ್ನು ಒಪ್ಪಿಕೊಳ್ಳಲು ತಯಾರಾಗಿಲ್ಲ ಏಕೆಂದರೆ ಪುರುಷ ಪ್ರಾಬಲ್ಯತೆಗೆ ಅವರ ಅಧೀನತೆಗೆ ಒಳಪಡಲು ಇಚ್ಛಿಸುವುದಿಲ್ಲ, ಬದಲಾಗಿ ಪುರುಷರಷ್ಟೇ ಸಮಾನ ಸ್ಥಾನಮಾನವನ್ನು ಹೊಂದುವ ಆಕಾಂಕ್ಷೆಯನ್ನು ಹೊಂದಿದ್ದಾರೆ.

ಆಧುನಿಕ ಯುಗದಲ್ಲಿ ಇಸ್ಲಾಮಿಕ್ ಮಹಿಳೆಯರ ಹಕ್ಕುಗಳು ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಇಸ್ಲಾಂ ಧರ್ಮದಲ್ಲಿ ಮಹಿಳೆಯು ತನ್ನ ಜೀವಿತಾವಧಿಯಲ್ಲಿ ನಿರ್ವಹಿಸಬೇಕಾದ ಕರ್ಮಗಳ ಬಗ್ಗೆ ವಿವರವಾಗಿ ತಿಳಿಸಲಾಗಿದೆ. ಹಾಗೆಯೇ ಇಸ್ಲಾಂ ಧರ್ಮವು ಮಹಿಳೆಯರ ಸ್ಥಾನಮಾನದ ಸುಧಾರಣೆಗೆ ಹಲವು ವಿಧಗಳಲ್ಲಿ ಕೊಡುಗೆಯನ್ನು ನೀಡುತ್ತದೆ. ಉದಾಹರಣೆಗೆ; ಮಹಿಳೆಯರನ್ನು ಉತ್ತಮವಾಗಿ ಗೌರವಿಸುವುದು, ಪುನರ್‌ವಿವಾಹ, ಅಧ್ಯಯನ ಮಾಡಲು ಪ್ರೋತ್ಸಾಹ ನೀಡುವುದನ್ನು ಗಮನಿಸಬಹುದಾಗಿದೆ.

ಅನೇಕ ಧಾರ್ಮಿಕ ಪುಸ್ತಕಗಳಲ್ಲಿಯೂ ಕೂಡ ಇಸ್ಲಾಂ ಧರ್ಮದಲ್ಲಿ ಮಹಿಳೆಯರನ್ನು ಕೆಟ್ಟದಾಗಿ ಪರಿಗಣಿಸುವುದಿಲ್ಲ ಎಂಬ ಅಂಶವನ್ನು ಸೂಚಿಸುತ್ತದೆ. ಆದರೆ ದುರಾದೃಷ್ಟವಶಾತ್ ನಿಜವಾದ ಆಚರಣೆಯಲ್ಲಿ

ಕುರಾನ್‌ನ ತತ್ವಗಳನ್ನು ಮತ್ತು ಆದೇಶಗಳನ್ನು ತಪ್ಪಾಗಿ ಅರ್ಥೈಸುವುದು ಇದರಿಂದಾಗಿ ಇಸ್ಲಾಂನಲ್ಲಿ ಮಹಿಳೆಯರ ಸ್ಥಾನಮಾನವನ್ನು ಕೀಳಾಗಿ ಪ್ರತಿಬಿಂಬಿಸುವುದು ಒಂದು ಪ್ರವೃತ್ತಿ ಎಂದು ಹೇಳಬಹುದಾಗಿದೆ.

ಮತ್ತೊಂದೆಡೆ ಮುಸ್ಲಿಂ ಜರ್ನಲ್‌ವೊಂದರಲ್ಲಿ ಅಸ್ಗರ್‌ಅಲಿ ಹೇಳುವಂತೆ "ಅಲ್ಪಸಂಖ್ಯಾತರನ್ನು ಹೆಚ್ಚಾಗಿ ಮತಾಂದ ಮತ್ತು ಮೂಲಭೂತವಾದಿಗಳು ಎಂದು ರೂಢಿಗತಗೊಳಿಸಲಾಗುತ್ತದೆ ಮತ್ತು ಕೆಲವೇ ವ್ಯಕ್ತಿಗಳ ಕೃತ್ಯಗಳನ್ನು ಇಡೀ ಸಮುದಾಯದ ಜನರು ಅನುಭವಿಸುತ್ತಾರೆ". ಎಂದು ತಿಳಿಸಿದ್ದಾರೆ. ಇಸ್ಲಾಂ ಧರ್ಮವು ಇತರ ಧಾರ್ಮಿಕ ಸಂಪ್ರದಾಯಗಳು ಅಥವಾ ಕಾನೂನುಗಳಿಗಿಂತ ಮಹಿಳೆಯರನ್ನು ಉತ್ತಮವಾಗಿ ಪರಿಗಣಿಸುತ್ತದೆ. ಆದರೆ ಯಾವುದೇ ಮಾಧ್ಯಮದಲ್ಲಿ ಈ ವಿಚಾರವನ್ನು ವಿಶ್ಲೇಷಣಾತ್ಮಕವಾಗಿ ಹೊರತಂದಿಲ್ಲ ಬದಲಾಗಿ ಮಾಧ್ಯಮಗಳಲ್ಲಿ ಪ್ರಕ್ಷೇಪಿಸಲ್ಪಟ್ಟ ಏಕೈಕ ವಿಷಯವೆಂದರೆ ಇಸ್ಲಾಂ ಧರ್ಮವು ಮಹಿಳೆಯರಿಗೆ ಕೆಟ್ಟದಾಗಿ ನಡೆಸಿಕೊಳ್ಳುತ್ತದೆ ಎಂಬ ವಿಚಾರವಾಗಿದೆ.

ಸರ್ಕಾರವು ಮುಸ್ಲಿಂರ ಸಾಮಾಜಿಕ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ರಚಿಸಿದಂತಹ ಸಾಚಾರ್ ಸಮಿತಿಯ ವರದಿಯಲ್ಲಿ ಪ್ರಮುಖವಾಗಿ ಮುಸ್ಲಿಂರು ಮತ್ತು ಮುಸ್ಲಿಂ ಹುಡುಗಿಯರ ಶಿಕ್ಷಣದ ಸ್ಥಿತಿಯನ್ನು ಸುಧಾರಿಸಲು ಶಿಫಾರಸ್ಸು ಮಾಡಲಾಗಿದೆ. ಹಾಗಾಗಿ ಈ ಸಮಿತಿಯು ನೀಡಿದ ಶಿಫಾರಸ್ಸುಗಳನ್ನು ಸರ್ಕಾರ ಅಂಗೀಕರಿಸಿತು ಮತ್ತು ಅಲ್ಪಸಂಖ್ಯಾತ ಸಮುದಾಯದ ಹುಡುಗಿಯರ ಮೇಲೆ ವಿಶೇಷ ಗಮನಹರಿಸಿ ದೇಶದ ಮುಸ್ಲಿಂರ ಶಿಕ್ಷಣದ ಸ್ಥಿತಿಯನ್ನು ಸುಧಾರಿಸುವ ಶಿಫಾರಸ್ಸುಗಳನ್ನು ಸಾಕಾರಗೊಳಿಸಲು ಕ್ರಮಗಳನ್ನು ತೆಗೆದುಕೊಂಡಿತು. ಅವುಗಳಲ್ಲಿ ಸರ್ವಶಿಕ್ಷಣ ಅಭಿಯಾನ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಕಸ್ತೂರ್ ಬಾ ಗಾಂಧಿ ಬಾಲಿಕಾ ವಿದ್ಯಾಲಯ ಯೋಜನೆ, ಇತರೆ ಹಲವು ಸರ್ಕಾರಿ ಶೈಕ್ಷಣಿಕ ಯೋಜನೆಗಳ ಮೂಲಕ ಶಿಕ್ಷಣದ ಅವಕಾಶಗಳನ್ನು ಒದಗಿಸುವುದು. ಬಾಲಕಿಯರಿಗೆ ಮಾತ್ರ ಶಾಲೆಗಳನ್ನು ಒದಗಿಸುವ ಮೂಲಕ ಬಾಲಕಿಯರ ಮೇಲಿನ ಪ್ರಾಥಮಿಕ ಶಾಲೆಗಳ ವ್ಯಾಪ್ತಿಯನ್ನು ಸುಧಾರಿಸುವುದು, ಮುಖ್ಯವಾಗಿ ಮುಸ್ಲಿಂ ಪ್ರಾಬಲ್ಯದ ಪ್ರದೇಶಗಳಲ್ಲಿ ಬಾಲಕಿಯರ ವಸತಿ ಶಾಲೆಗಳನ್ನು ಸೇರಿಸಲು ಕೆಲವು ಯೋಜನೆಗಳನ್ನು ವಿಸ್ತರಿಸಲಾಯಿತು. ಅಲ್ಪಸಂಖ್ಯಾತ ಬಾಲಕಿಯರಿಗೆ ಶೈಕ್ಷಣಿಕ ವಿದ್ಯಾರ್ಥಿ ವೇತನವನ್ನು ಸಹ ಒದಗಿಸಲಾಯಿತು. ಹಾಗೆಯೇ ಅಲ್ಪಸಂಖ್ಯಾತ ಮಹಿಳೆಯರಿಗಾಗಿ ನಾಯಕತ್ವ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವುದು ಮತ್ತು ಹದಿಹರೆಯದ ಬಾಲಕಿಯರ ಸಬಲೀಕರಣಕ್ಕಾಗಿ ರಾಜೀವ್‌ಗಾಂಧಿ ಯೋಜನೆ ಇವುಗಳು ಪ್ರಮುಖವಾದ ಮಹಿಳಾ ಅಭಿವೃದ್ಧಿ ಯೋಜನೆಗಳಾಗಿ ಕಂಡುಬಂದಿದೆ. ಇಷ್ಟೆಲ್ಲಾ ಯೋಜನೆಗಳನ್ನು ಸರ್ಕಾರವು ಹೊಂದಿದ್ದರೂ ಕೂಡ ಮುಸ್ಲಿಂರ ಶೈಕ್ಷಣಿಕ ಸ್ಥಾನಮಾನವನ್ನು ಸುಧಾರಿಸುವ ಸವಾಲುಗಳಿಗೆ ಸ್ಪಂದಿಸುವಲ್ಲಿ ವಿಫಲರಾಗಿದ್ದಾರೆ.

ಮುಸ್ಲಿಂರು ತಮ್ಮ ಶೈಕ್ಷಣಿಕ ಸಾಧನೆಗಳಲ್ಲಿ ಹಿಂದುಳಿದಿದ್ದಾರೆ ಮತ್ತು ಅವರ ಶೈಕ್ಷಣಿಕ ಅಭಿವೃದ್ಧಿಯ ವೇಗವು ನಿಧಾನಗತಿಯಲ್ಲಿದೆ. ಇದು ಸಮುದಾಯದ ಸುಧಾರಣೆಗೆ ನಿರ್ದೇಶಿಸಲಾದ ಸರ್ಕಾರದ ನೀತಿಗಳು ಮತ್ತು ಕಾರ್ಯಕ್ರಮಗಳ ಸೂತ್ರೀಕರಣ. ಅನುಷ್ಠಾನ ಮತ್ತು ಮೇಲ್ವಿಚಾರಣೆಯ ಬಗ್ಗೆ ಕಳವಳವನ್ನುಂಟು ಮಾಡಿದೆ. ಬಹುತೇಕ ಪ್ರದೇಶಗಳಲ್ಲಿ ಅಸ್ತಿತ್ವದಲ್ಲಿಲ್ಲದ ಗುಣಮಟ್ಟದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಸ್ಥಾಪಿಸುವ ಮೂಲಕ ಮುಸ್ಲಿಂಗಳ ಬದಲು, ಮುಸ್ಲಿಂರಿಗೆ ಉನ್ನತ ಮಟ್ಟದ ಮತ್ತು ವೃತ್ತಿಪರ ಶಿಕ್ಷಣವನ್ನು ನೀಡಲು ಹೆಚ್ಚಿನ ಒತ್ತು ನೀಡಲಾಗಿದೆ.

ಸಾಮಾಜಿಕವಾದ ಸಂಪ್ರದಾಯಗಳು ಮುಸ್ಲಿಂ ಹುಡುಗಿಯರ ಶಾಲೆಗಳಿಂದ ಹಿಂದೆ ಸರಿಯಲು ಕಾರಣವಾಗಿದೆ ಮತ್ತು ಇವರು ಯಾವುದೇ ಶಿಕ್ಷಣ ಸಂಸ್ಥೆಗೆ ಸೇರ್ಪಡೆಗೊಳ್ಳುವುದನ್ನು ಹಾಗು ಹಾಜರಾಗುವುದನ್ನು ಉಲ್ಬಣಗೊಳಿಸುತ್ತದೆ. ಕೆಲವೊಂದು ಮುಸ್ಲಿಂ ಕುಟುಂಬದ ರಚನೆಯು ಅಂತರ್ಗತವಾಗಿ ಶಕ್ತಿಯನ್ನು ಹೊಂದಿರಬಹುದು ಮತ್ತು ಇದು ಉನ್ನತ ಶಿಕ್ಷಣದಲ್ಲಿ ಹೆಣ್ಣು ಮಕ್ಕಳ ಭಾಗವಹಿಸುವಿಕೆಗೆ ತಡೆಗೋಡೆಯಾಗಿ ಕಾರ್ಯನಿರ್ವಹಿಸುತ್ತದೆ. ಇದಲ್ಲದೇ ಸಾಚಾರ್ ಸಮಿತಿಯ ವರದಿಯಲ್ಲಿ ಉಲ್ಲೇಖಿಸಿರುವಂತೆ, ವಾಸಿಸುವ ಸ್ಥಳ ಮತ್ತು ಶಿಕ್ಷಣದ ನಡುವೆ ಪರಸ್ಪರ ಸಂಬಂಧವಿದೆ. ಈ ಸಂಬಂಧವು ಕೆಲವು ಮುಸ್ಲಿಂ ಪೋಷಕರು ತಮ್ಮ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸದಿರಲು, ವಿಶೇಷವಾಗಿ ಪ್ರೌಢಾವಸ್ಥೆಯ ನಂತರ ತಮ್ಮ ನೆರೆಹೊರೆಯ ಮಹಿಳೆಯರಿಗೆ ಸುರಕ್ಷತೆಯ ಕೊರತೆಯು ಮತ್ತೊಂದು ಕಾರಣವಾಗಬಹುದು.

ಮುಸ್ಲಿಂ ಹೆಣ್ಣುಮಕ್ಕಳಿಗೆ ಪರ್ದಾ ವ್ಯವಸ್ಥೆ ಬಹುವಿವಾಹ ಅಭ್ಯಾಸ, ಸಮುದಾಯದಲ್ಲಿ ಜಾರಿಯಲ್ಲಿರುವ ವಿಚ್ಚೇದನ ವ್ಯವಸ್ಥೆ ಅಥವಾ ಪ್ರತ್ಯೇಕತೆಯ ಏಕಪಕ್ಷೀಯ ವ್ಯವಸ್ಥೆ, ಹೆಣ್ಣು ಮಕ್ಕಳ ಶಿಕ್ಷಣವನ್ನು ಅನಗತ್ಯವೆಂದು ಪರಿಗಣಿಸುವ ದೃಷ್ಟಿಕೋನ (ಉನ್ನತ ವಿದ್ಯಾಭ್ಯಾಸ ಹೊಂದಿದ ಹುಡುಗಿಗೆ ವರನು ದೊರೆಯುವುದು ಬಹಳ ಕಡಿಮೆ) ಈ ಮುಂತಾದ ಕಾರಣಗಳಿಂದಾಗಿ ಶೈಕ್ಷಣಿಕವಾಗಿ ಹೆಣ್ಣುಮಕ್ಕಳು ಹಿಂದುಳಿದಿದ್ದಾರೆ. ಇದಲ್ಲದೇ ಕುಟುಂಬದಲ್ಲಿ ಪೋಷಕರ ಶಿಕ್ಷಣಮಟ್ಟ, ಪೋಷಕರ ವರ್ತನೆ, ಮನೆಯ ಆದಾಯ, ಕುಟುಂಬ ಸದಸ್ಯರ ವಾಸ ಸ್ಥಳ ಇವುಗಳು ಮಕ್ಕಳ ಶಿಕ್ಷಣ ಭಾಗವಹಿಸುವಿಕೆಯನ್ನು ನಿರ್ಧರಿಸುವಲ್ಲಿ ಪ್ರಮುಖಪಾತ್ರವಹಿಸುತ್ತದೆ.

ಈ ಮೇಲಿನ ಕಾರಣಗಳಿಂದಾಗಿ ತಿಳಿಯುವ ವಿಷಯವೇನೆಂದರೆ ಮುಸ್ಲಿಂ ಹುಡುಗಿಯರ ಶಿಕ್ಷಣದಲ್ಲಿ ಭಾಗವಹಿಸುವಿಕೆಯ ಪ್ರಮಾಣವು ಕಳಪೆಮಟ್ಟದಲ್ಲಿರಲು ಮನೆಯ ಅಂಶಗಳೇ ಬಹುತೇಕ ಕಾರಣವಾಗಿದೆ. ಹಾಗಾಗಿ ಮುಸ್ಲಿಂ ಹುಡುಗಿಯರ ಶಿಕ್ಷಣವನ್ನು ಬೆಂಬಲಿಸುವತ್ತ ಮತ್ತು ಸುಧಾರಿಸುವತ್ತ ಗಮನಹರಿಸಬೇಕು. ಸಮುದಾಯದ ಸದಸ್ಯರನ್ನು ಸಜ್ಜುಗೊಳಿಸುವ ಮೂಲಕ ಉನ್ನತ ಶಿಕ್ಷಣದಲ್ಲಿ ಅದರ ಭಾಗವಹಿಸುವಿಕೆಯನ್ನು ಹೆಚ್ಚಿಸಬೇಕು ಭವಿಷ್ಯದಲ್ಲಿ ಆರ್ಥಿಕ ಪರಿಸ್ಥಿತಿಯನ್ನು ಸುದಾರಿಸಲು ಆರ್ಥಿಕ ಅಭಿವೃದ್ಧಿಯಲ್ಲಿ ಶಿಕ್ಷಣದ ಅವಶ್ಯಕತೆಯ ಬಗ್ಗೆ ಜಾಗೃತಿ ಮೂಡಿಸುವುದು. ಆರ್ಥಿಕತೆಯ ದೃಷ್ಟಿಕೋನದಿಂದ ಶೈಕ್ಷಣಿಕ ಸಬ್ಸಿಡಿಗಳು, ಸಾಲಗಳು, ಮತ್ತು ಮೆರಿಟ್ ಸ್ಕಾಲರ್ ಶಿಪ್ ಕಾಯಕ್ರಮಗಳ ಮೂಲಕ ಎಲ್ಲಾ ವಯಸ್ಸಿನ ಮುಸ್ಲಿಂ ಮಹಿಳೆಯರನ್ನು ಶಿಕ್ಷಣ ತರಗತಿಗಳಿಗೆ ಸೇರಲು ಪ್ರೋತ್ಸಾಹಿಸುವ ಮೂಲಕ ಶೈಕ್ಷಣಿಕ ಬೆಂಬಲವನ್ನು ನೀಡಬೇಕು. ಸಾಂಸ್ಥಿಕ ಪಕ್ಷಪಾತವಿಲ್ಲದೇ ಹಲವಾರು ಶೈಕ್ಷಣಿಕ ಕಾರ್ಯಕ್ರಮಗಳು ಮತ್ತು ಬೆಂಬಲ ಯೋಜನೆಗಳನ್ನು ಸರಿಯಾಗಿ ಹಂಚಿಕೆ ಮಾಡಬೇಕು. ಕೌಶಲ್ಯ ತರಬೇತಿ ಮತ್ತು ತರಬೇತಿ ತರಗತಿಗಳನ್ನು ಮೀರಿ ಶೈಕ್ಷಣಿಕ ಉಪಕ್ರಮಗಳನ್ನು ರಚಿಸುವಲ್ಲಿ ಸರ್ಕಾರ ಸಮುದಾಯ ಮತ್ತು ಸ್ಥಳೀಯರು ಮತ್ತು ಧರ್ಮದ ಎಲ್ಲರ ಸಕ್ರೀಯ ಭಾಗವಹಿಸುವಿಕೆಯನ್ನು ಸರ್ಕಾರದ ನೀತಿಗಳು ಮತ್ತು ಕಾರ್ಯಕ್ರಮಗಳಲ್ಲಿ ಸೇರಿಸಬೇಕು ಮತ್ತು ಪ್ರಾರಂಭಿಸಬೇಕು.

'ಶಿಕ್ಷಣ ಹಕ್ಕು ಕಾಯ್ದೆ 2009' ರಂತಹ ಶಿಕ್ಷಣ ಕಾಯ್ದೆಗೆ ಭಾರತದ ಪ್ರತಿಯೊಂದು ರಾಜ್ಯಕ್ಕೂ ವಿಸ್ತರಿಸಲು ಮತ್ತು ಮೇಲ್ವಿಚಾರಣೆ ಮಾಡಲು ಸರಿಯಾದ ಪ್ರಯತ್ನಗಳನ್ನು ತೆಗೆದುಕೊಳ್ಳಬೇಕು. ಮುಸ್ಲಿಂರಿಗೆ

ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ಸರ್ಕಾರೇತರ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು, ಸಾರ್ವಜನಿಕ ಮತ್ತು ಖಾಸಗಿ ವಲಯಗಳು ಒಟ್ಟಾಗಿ ಕೆಲಸಮಾಡಬೇಕು. ಇದಲ್ಲದೇ ಸಮುದಾಯದ ಶೈಕ್ಷಣಿಕ ಅಭಿವೃದ್ಧಿಗೆ ನಗರ ಮತ್ತು ಗ್ರಾಮೀಣ ವಿಭಜನೆಯನ್ನು ಶಿಕ್ಷಣದಲ್ಲಿ ಸೇರಿಸುವುದು ಅವಶ್ಯಕ ಎಂಬುದಾಗಿ ಅಭಿಪ್ರಾಯ ಪಡಬಹುದಾಗಿದೆ.

**ಉಪಸಂಹಾರ**

21ನೇ ಶತಮಾನವು ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳ ಶತಮಾನವಾಗಿದೆ. ಹಾಗಾಗಿ ವಿಶ್ವದಲ್ಲಿಯೇ ಸದೃಢವಾದ ಪ್ರಜಾಪ್ರಭುತ್ವವನ್ನು ಭಾರತವು ಹೊಂದಿದೆ ಮತ್ತು ಪ್ರಜಾಪ್ರಭುತ್ವವನ್ನು ಇನ್ನಷ್ಟೂ ಗಾಢವಾಗಿಸುವುದು ಮತ್ತು ಸದೃಢಗೊಳಿಸಬೇಕಾಗಿರುವುದು ಅವಶ್ಯಕ. ಆದ್ದರಿಂದ ರಾಷ್ಟ್ರದ ಜಾತ್ಯತೀತ ತತ್ವವನ್ನು ಇನ್ನಷ್ಟೂ ಬಲಗೊಳಿಸಬೇಕಾಗಿದೆ. ಆದ್ದರಿಂದ ಅಲ್ಪಸಂಖ್ಯಾತರನ್ನು ಅವರ ಸವಲತ್ತುಗಳನ್ನು ಹೆಚ್ಚಿಸಬೇಕು ಮತ್ತು ಅಲ್ಪಸಂಖ್ಯಾತರ ಮುಸ್ಲಿಂ ಮಹಿಳೆಯರ ಶಿಕ್ಷಣ ಹಕ್ಕುಗಳ ಕಡೆಗೆ ಹೆಚ್ಚಿನ ಗಮನಹರಿಸಬೇಕಾಗಿದೆ. ಭಾರತದಲ್ಲಿ ಹೆಚ್ಚಿನದಾಗಿ ಮುಸ್ಲಿಂ ಮಹಿಳೆಯರ ಬಡತನದ ಸ್ಥಿತಿಯು ಅವರ ಶೈಕ್ಷಣಿಕ ಪ್ರಗತಿಗೆ ಅಡ್ಡಿಯಾಗಿದೆ. ಹಾಗಾಗಿ ಸರ್ಕಾರವು ಜಾರಿಗೆ ತಂದಿರುವ ಹಲವಾರು ಯೋಜನೆಗಳನ್ನು ಜಾರಿಗೊಳಿಸುವಲ್ಲಿ ರಾಜಕೀಯ ಸಂಸ್ಥೆಗಳ ಸಕ್ರಿಯ ಹಸ್ತಕ್ಷೇಪವನ್ನು ಒತ್ತಿಹೇಳಬೇಕಾಗಿದೆ. ಹಾಗಾಗಿ ಅಲ್ಪಸಂಖ್ಯಾತರ ಹೆಚ್ಚು ಸುರಕ್ಷಿತರಾಗಿದ್ದಾರೆ ಎನ್ನುವ ಭಾವನೆಯನ್ನು ಸೃಷ್ಟಿಸಬೇಕಾಗಿದೆ. ಹಾಗೂ ಮೂಲಭೂತ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯುವ ಪ್ರಯತ್ನ ಮಾಡಬೇಕಾಗಿದೆ. ಧಾರ್ಮಿಕ ಕಾನೂನುಗಳನ್ನು ಆಧರಿಸಿದ ಹೊಸ ವಿಧಾನ ಮುಸ್ಲಿಂ ಮಹಿಳೆಯರ ಶೋಷಣೆಯ ಅಂತ್ಯಕ್ಕೆ ಕಾರಣವಾಗುತ್ತದೆ ಎಂದು ಅಭಿಪ್ರಾಯಪಡಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


- ಸಾಚಾರ್ ಸಮಿತಿ ವರದಿ. (2006). *ಭಾರತದಲ್ಲಿ ಮುಸ್ಲಿಂ ಸಮುದಾಯದ ಸಾಮಾಜಿಕ, ಆರ್ಥಿಕ ಮತ್ತು ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿ ಒಂದು ವರದಿ.* ಭಾರತ ಸರ್ಕಾರ
- ಶಿಂದೆ, ಎಸ್., ಜಾನ್, ಎ. (2012) ಭಾರತದಲ್ಲಿ ಮುಸ್ಲಿಂ ಮಹಿಳೆಯರ ಶೈಕ್ಷಣಿಕ ಸ್ಥಿತಿ. *ಸಂಶೋಧನೆಯ ವಿಮರ್ಶೆ.*
- Biswas, R. (2016). Higher education for Muslim women empowerment in India. *International Journal of Scientific Research and Education, 4*(8), 5661–5664.
- Engineer, A. A. (1999). *Media and minorities: Secular perspective*. Institute of Islamic Studies and Centre for Study of Society and Secularism.
- Menon, I. (1981). *Condition of Muslim woman in India*. Delhi: Uppal Publications.